

ಹಾ ಏನಾಗುತ್ತಿದೆ, ನಾನು ಹೀಗೆ ಮೇಲೆರಲು ಹೇಗೆ ಸಾಧ್ಯವೆಂದುಕೊಂಡು ಸುತ್ತಲೂ ನೋಡಿದರೆ ನನಗೂ ರೆಕ್ಕೆ ಬಂದಿರುವುದರ ಅರಿವಾಯಿತು. ಓಹ್, ಮೆಲ್ಲನೆ ರೆಕ್ಕೆಗಳನ್ನು ಬಡಿದೆ... ಓಹ್... ಓಹ್... ಮತ್ತೆ ಬಡಿದೆ, ಇನ್ನೂ ಸ್ವಲ್ಪ ನೆಲದಿಂದ ಮೇಲೆಕ್ಕೆ... ದೇವಾ! ನಾನೀಗ ಹಾರುತ್ತಿದ್ದೇನೆ. ಮತ್ತೆ ಬಡಿದೆ... ಮೇಲೇರಿದೆ... ಮತ್ತೆ ಬಡಿಯುತ್ತಾ ಹೋದೆ... ಇನ್ನೂ ಮೇಲೇರುತ್ತಿದ್ದೇನೆ... ಮೇಲೇರುತ್ತಾ ಮೇಲೇರುತ್ತಾ ಚಿಟ್ಟೆಗಳೊಂದಿಗೆ ನಾನೂ ಚಿಟ್ಟೆಯಾಗಿ ಹಾರುತ್ತಾ ಮನೆಯ ಮೇಲೇರಿದೆ.

ಪಕಪಕನೆ ನಗುತ್ತಿದ್ದ ಮಂಗಟ್ಟೆ ಸದ್ದು ಮಾಡಿಕೊಂಡು ಹಣ್ಣು ತಿನ್ನುತ್ತಿದೆ. ಗಸಗಸೆಯ ಮರದ ಹಕ್ಕಿಗಳಲ್ಲಿ ಕೋಲಾಹಲ. ಮೈನಾಗಳು ಕೀ ಕೀ ಅನ್ನುತ್ತಾ ಕಲಹದಲ್ಲಿವೆ. ನಗು ಬಂತು. ಕಲಹ ಬಹುಶಃ ಜೀವಸಂಕುಲದ ಜೀನಿನಲ್ಲಿಯೇ ಇದೆ ಎಂದು ಕಾಣುತ್ತಿದೆ. ಹಳದಿ ಬುಲ್ ಬುಲ್ ಒಂದು ಕಂದು ಬಣ್ಣದ ಬುಲ್ ಬುಲ್ ಹಕ್ಕಿಯನ್ನು ಹಣ್ಣಿನಿಂದ ದೂರ ಓಡಿಸುತ್ತಿತ್ತು. ಕುಟ್ರ ಹಕ್ಕಿ ಕೊಂಬೆಯಿಂದ ಕೊಂಬೆಗೆ ಹಾರುತ್ತಾ ಇದ್ದರೆ, ಹಸಿರು ಹಕ್ಕಿ ಗಬಗಬನೆ ಹಣ್ಣು ತಿನ್ನುತ್ತಿದೆ. ನಿಧಾನಕ್ಕೆ ರೆಕ್ಕೆ ಬಡಿಯುತ್ತಾ ತೋಟದ ಮೇಲೆ ಹಾರುತ್ತಿದ್ದಂತೇ ಅಗೋ ಅಲ್ಲಿ, ನೀರಿನ ತೋಡಿನ ಬದಿಯಲ್ಲಿ ಹೆಬ್ಬಾವುಗಳು ಒಂದನ್ನೊಂದು ಬೆಸೆದುಕೊಂಡು ಬುಸುಗುಡುತ್ತಾ ಮೈಮರೆಯುತ್ತಿವೆ. ಓಹ್, ಈ ಆಲಿಂಗನ, ಸ್ಪರ್ಶದಾಟ ಜೀವಕ್ಕೆಷ್ಟು ಅಗತ್ಯ! ನೋಡಲೂ ಮುಜುಗರವಾಯಿತು. ಅವುಗಳ ಬುಸ್ ಬುಸುಗಳಿಂದ ಅವು ಮಾತೂ ಆಡುತ್ತಿವೆ ಅನಿಸಿತು. ಹಾಗೇ ರೆಕ್ಕೆ ಬಡಿಯುತ್ತಾ ತೋಟದ ಅಂಚಿಗೆ ಬಂದಂತೇ ಬಂಟಮಲೆಯ ಶುರುವಾಗುವಲ್ಲಿಗೇ ಬಂದು ನಿಂತಿದ್ದೆ. ಒಮ್ಮೆ ರೆಕ್ಕೆ ಬಡಿಯುವುದನ್ನು ನಿಲ್ಲಿಸಿ ನೋಡಿದೆ. ಹ್ಮ.. ಒಂದು ವಿಶೇಷವಾದ ಸುವಾಸನೆ ಮೂಗಿಗೆ ಬಡಿಯಿತು. ರೆಕ್ಕೆ ಬಡಿದು ದಿವ್ಯಗಂಧ ಮೂಗಿಗಡುರುತ್ತಿದ್ದ ಹಾಲೆ ಮರದ ಕಾಂಡಕ್ಕೆ ಅಂಟಿಕೊಂಡು ಕಿವಿಗೊಟ್ಟೆ. ಮರದ ಕಾಂಡದಲ್ಲಿ ಜೀವರಸ ಮೆಲುವಾಗಿ ಹರಿಯುತ್ತಿದೆಯಲ್ಲವೇ! ಕಿವಿ ಅಗಲಿಸಿ ನೂರು ಕಡೆ ಆಲಿಸಿದೆ. ಪರ್ಯಾಯ ಜೀವಜಾತ್ರೆಯೇ ನಡೆಯುತ್ತಿದೆ... ಟಿ...ಟಿ...ಟಿ... ಕೀಕಿಕಿಕಿ... ಕೇ...ಕೇ... ನೀಲ, ಮಯೂರಿಯನ್ನು ನರ್ತನಕ್ಕೆ ಕರೆಯುತ್ತಿದ್ದಾನೆ. ಟಪ್ ಟಪ್ ಬೀಜಗಳು ಸಿಡಿದು ತೇವದ ಗರ್ಭಕ್ಕೆ ಬೀಳುತ್ತಿದೆ...ನವರಸಗಳ ಲಾಸ್ಯವಿಲ್ಲಿ ನಡೆಯುತ್ತಿದೆ...

ದೇಹವೇ ಇಲ್ಲದ ಭಾವದಿಂದ ಹಗುರವಾಗುತ್ತಾ ಸಾಗಿದೆ. ಒಂದೊಂದು ಎತ್ತರ ಏರುತ್ತಿದ್ದಂತೇ ನೆಲದ ನಂಟು ಜಾರತೊಡಗಿತು...

ಕಿಕ್...ಕಿಕ್...ಗಟ್ಟಿ ಹಾರ್ನ್ ಹೊಡೆದ ಸದ್ದಿಗೆ ಬೆಚ್ಚಿ ಕಣ್ಣು ತೆರೆದೆ. ಎದುರಿನಲ್ಲಿ ಬಂಟಮಲೆ ನಗುತ್ತಿತ್ತು. ಶಬ್ದದೊಳಗಿನ ನಿಶ್ಶಬ್ದವೂ ನಿಶ್ಶಬ್ದದೊಳಗಿನ ಶಬ್ದವೂ ಕಿವಿಯಲ್ಲಿ ಅನುರಣಿಸುತ್ತಿತ್ತು.

●